ಓ.ಎಸ್. ನಂ. 129/2022
ಪಿ. ಡಬ್ಲ್ಯೂ-1

<u>ದಿನಾಂಕಃ **08-09-2023**</u>
ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ **3** ರಿಂದ **5** ರವರು ಪ್ರತಿವಾದಿ ಪರ ಎಸ್ ಬಿ ಪಿ ವಕೀಲರಿಂದ ಃ</u>

ದಾವಾ ಆಸ್ತಿ ಯ ಸರ್ವೆ ನಂ.601 ಇದೆ. ಅದು 9 ಏಕರೆ ಇದೆ. ಅದು ಏಷ್ಟು ಹಿಸ್ಸಾಗಳು ಇವೆ ಎಂದರೆ ನನಗೆ ಗೊತ್ತಿಲ್ಲ. ನನಗೆ ದಿಕ್ಕು ಗೊತ್ತಾಗುವುದಿಲ್ಲ. ಮತ್ತು ಯಾರ ಹೊಲ ಯಾವ ದಿಕ್ಕಿಗೆ ಇದೆ ಎಂದರೆ ನನಗೆ ಗೊತ್ತಿಲ್ಲ. ನಾನೇ ಸ್ವತಃ ಹೇಳಿ ಬರೆಸಿರುತ್ತೇನೆ. ಸುಮಾರು 20 ವರ್ಷದ ಹಿಂದೆ ನಾನು ದಾವಾ ಆಸ್ತಿಯನ್ನು ನೋಡಿರುತ್ತೇನೆ. ನನ್ನ ದಾವೆಯಲ್ಲಿ ನಾನು ಚೆಕಬಂದಿ ತೋರಿಸಿದ್ದೇನೆ ಎಂದರೆ ಸರಿ. ನಾನು ತೋರಿಸಿದ ಚೆಕಬಂದಿ ಸುಳ್ಳು ಇದೆ ಎಂದರೆ ಸರಿಯಲ್ಲ. ನಾನು ಈಗ ಹೊಲ ನೋಡಿಕೊಂಡು ಬಂದು ಚೆಕಬಂದಿ ತೋರಿಸಿರುತ್ತೇನೆ. ನಾನು ದಾವಾ ಹಾಕುವ ಸಮಯದಲ್ಲಿ ದಾವಾ ಆಸ್ತಿಯಲ್ಲಿ ಒಂದು ಕಾಲೇಜ್ ಇತ್ತು. ದಾವಾ ಮಾಡುವ ಸಮಯದಲ್ಲಿ ದಾವಾ ಆಸ್ತಿಯು ಅಖಂಡವಾಗಿರುವುದಿಲ್ಲ ಎಂದರೆ ಸರಿ. ದಾವಾ ಮಾಡುವ ಸಮಯದಲ್ಲಿ ನಮ್ಮ ತಂದೆಯಾಗಿಲಿ ಅಥವಾ ನನ್ನ ಚಿಕ್ಕಪ್ಪನಾಗಲಿ ಮಾಲೀಕರು ಇದ್ದಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ಹಾಗೂ ನನ್ನ ಚಿಕ್ಕಪ್ಪ 2001 ನೇ ಸಾಲಿನಲ್ಲಿ ದಾವಾ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ ಮತ್ತು ಇಲ್ಲಿಯವರೆಗೂ ಸಹ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಮ್ಮ ತಂದೆ ಹಾಗೂ ನನ್ನ ಚಿಕ್ಕಪ್ಪ 3 ರಿಂದ 5 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿದ ದಿನಾಂಕದಿಂದ ಅವರೇ ಮಾಲಿಕರು ಮತ್ತು ಕಬ್ಜೆದಾರರು ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮತ್ತು ಅವರು ದಾವಾ ಆಸ್ತಿಯನ್ನು ಎನ್. ಎ ಮಾಡಿಸಿ ಪ್ಲಾಟ ಸಹ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಬಹಳಷ್ಟು ಜನರು ಪ್ಲಾಟಗಳನ್ನು ಖರೀದಿಸಹ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯಲ್ಲಿ ಕಾಲೇಜು ಮತ್ತು ಮನೆಗಳು ಇವೆ ಎಂದರೆ ನನಗೆ ಗೊತ್ತಿಲ್ಲ. ಖರೀದಿದಾರರ ಕಬ್ಜೆಯಲ್ಲಿಯೂ ಸಹ ಇದೆ ಎಂದರೆ ಸರಿಯಲ್ಲ. ಖರೀದಿದಾರರಿಗೆ ನಾನವು ಈ ಪ್ರಕರಣದಲ್ಲಿ ಪಾರ್ಟಿ ಮಾಡಿದ್ದೇವೆ ಎಂದರೆ ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮುಖಾಂತರ ಬೆರಳಚ್ಚುಗಾರಳಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಯಾದಗಿರಿ